ಅ) ರಸ್ತೆ ಅಗಲೀಕರಣದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಪಟ್ಟಣ ಪ್ರದೇಶದ ಪರಿಮಿತಿಯಲ್ಲಿ ಬರುವ ರಸ್ತೆಗಳ ಅಗಲೀಕರಣದ ವಿಸ್ತೀರ್ಣವೆಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ರಾಷ್ಟ್ರೀಯ ಹೆದ್ದಾರಿ - 206 ತುಮಕೂರು - ಹೊನ್ನಾವರ ಹೆದ್ದಾರಿಯು ಒಟ್ಟು 365.6 ಕಿಮೀ ಉದ್ದವಿದ್ದು ಇಲ್ಲಿಯವರೆಗೂ ಈ ಕೆಳಕಂಡ ಕಾಮಗಾರಿಗಳನ್ನು ಮಾಡಲಾಗಿದೆ.

1.	ರೈಡಿಂಗ್ ಗುಣಮಟ್ಟ ಸುಧಾರಣೆ	- 265 ಕಿಮೀ
2.	ಸಂಚಾರ ಪಥದ ಅಗಲೀಕರಣ	- 5 ಕಿಮೀ
3.	ಹೆದ್ದಾರಿಯ ಬಲಪಡಿಸುವಿಕೆ	- 8 ಕಿಮೀ
	ಒಟ್ಟು	278 ಕಿಮೀ

ಇನ್ನೂ 87 ಕಿಮೀ ಉದ್ದದ ಹೆದ್ದಾರಿಯನ್ನು ಅಭಿವೃದ್ಧಿಪಡಿಸಬೇಕಿದೆ.

ಆ) ಭಾರತ ಸರ್ಕಾರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದವರು ಪ್ರತಿ ಸಾಲಿನ ಯೋಜನೆಗಳಡಿಯಲ್ಲಿ ಹಂತ ಹಂತವಾಗಿ ಅಗಲೀಕರಣ ಕೆಲಸವನ್ನು ಮಂಜೂರು ಮಾಡುತ್ತಾರೆ. ಪ್ರಸಕ್ತ ಸಾಲಿನಲ್ಲಿ ಈವರೆವಿಗೂ 48 ಕಿಮೀ ಉದ್ದದ ಸಂಚಾರ ಪಥದ ಅಗಲೀಕರಣದ ಕಾಮಗಾರಿ ಮಂಜೂರಾಗಿದೆ. ಈ ಕೆಲಸಗಳು ಪ್ರಗತಿಯಲ್ಲಿದೆ.

ಇ) ಪಟ್ಟಣ ಪ್ರದೇಶಗಳಲ್ಲಿ ಬರುವ ರಸ್ತೆಗಳ ಅಗಲೀಕರಣದ ವಿಸ್ತೀರ್ಣ 7 ಮೀಟರ್‌ಗಳು.

ಕೂಲಿ ಕಾರ್ಮಿಕರಿಗೆ ವೇತನ ಪಾವತಿಯಲ್ಲಿ ವಿಳಂಬ

1923 (2465) ಶ್ರೀ ಸಿ.ಚನ್ನಿಗಪ್ಪ (ಕೊರಟಗೆರೆ ಕ್ಷೇತ್ರ) ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನಲ್ಲಿರುವ ಟಿ.ಬೇಗೂರು ಗ್ರಾಮದಲ್ಲಿ ಸ್ಥಾಪನೆಯಾಗಿರುವ ಪೆಪ್ಸಿ ಕಂಪನಿಯ ಕಾರ್ಮಿಕ ಕೂಲಿಕಾರರಿಗೆ ಆಡಳಿತ ಮಂಡಳಿಯು ವೇತನವನ್ನು ನೀಡದೆ ತೊಂದರೆಯನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಮಾಲೀಕರ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಇ) ಸದರಿ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು? ಖಾಯಂ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಗೊಂಡಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಈ) ಸದರಿ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಬಡ ಕೂಲಿ ಕಾರ್ಮಿಕರಿಗೆ ಸರಿಯಾದ ವೇತನ ಹಾಗೂ ಇತರೆ ಸೌಲಭ್ಯವನ್ನು ಕಲ್ಪಿಸಿಕೊಡುವಂತೆ ಸರ್ಕಾರ ಆದೇಶ ನೀಡುವುದೇ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) :

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದುಲ್ಲ.

ಇ) ಖಾಯಂ ನೌಕರರು - 143

ಗುತ್ತಿಗೆ ಕಾರ್ಮಿಕರು - 260

(ಸರಾಸರಿ ಪ್ರತಿ ದಿನ)

ಈ) ಕಾರ್ಮಿಕರಿಗೆ, ಕಾರ್ಮಿಕ ಕಾನೂನುಗಳ ಅನ್ವಯ ಕನಿಷ್ಟ ವೇತನ, ಬೋನಸ್ ಇತ್ಯಾದಿ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ.

ಕೊರಟಗೆರೆ ತಾಲ್ಲೂಕಿನಲ್ಲಿ ಗೋಮಾಳ ಜಮೀನು ಹಂಚಿಕೆ

1924 (2466) ಶ್ರೀ ಚಿನ್ನಿಗಪ್ಪ.ಸಿ. (ಕೊರಟಗೆರೆ) ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಬಡ ರೈತಾಪಿ ವರ್ಗದವರಿಗೆ ಮೂರು ವರ್ಷಗಳ ಹಿಂದಿನಿಂದಲೂ ಹಂಚಿಕೆ ಮಾಡಿರುವ ಗೋಮಾಳ ಜಮೀನಿನ ಸರ್ವೆ ಸಂಖ್ಯೆ ಎಷ್ಟು? ಯಾವ ಬಡ ಫಲಾನುಭವಿಗಳಿಗೆ ಹಂಚಿಗೆ ಮಾಡಲಾಗಿದೆ? ವಿವರವಾದ ಮಾಹಿತಿ ಒದಗಿಸುವುದು.

ಆ) ಸರ್ವೆ ಗೋಮಾಳ ಜಮೀನು ಹಂಚಿಕೆಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಇ) ಸರ್ವೆ ಗೋಮಾಳ ಜಮೀನನ್ನು ಇದುವರೆಗೂ ಹಂಚಿಕೆ ಮಾಡದಿರಲು ಸ್ಪಷ್ಟ ಕಾರಣವೇನು?

ಈ) ಈಗ ಬಂದಿರುವ ಅರ್ಜಿಗಳ ಫಲಾನುಭವಿಗಳಿಗೆ ಜಮೀನುಗಳನ್ನು ಹಂಚಿಕೆ ಮಾಡಲು ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಈ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ 40 ಗೋಮಾಳದ ಸ.ನಂ.ಗಳ ಜಮೀನುಗಳಲ್ಲಿ 235-25 ಎಕರೆ ವಿಸ್ತೀರ್ಣ ಜಮೀನನ್ನು 154 ಫಲಾನುಭವಿಗಳಿಗೆ ಹಂಚಿಗೆ ಮಾಡಿರುತ್ತೆ ಪಟ್ಟಿ ಲಗತ್ತಿಸಿದೆ.

ಆ) 8684.

ಇ) ಸರ್ಕಾರದ ನಮೂನೆ 50 ಮತ್ತು ನಮೂನೆ - 53 ರಲ್ಲಿ ಬಗರ್ ಹುಕುಂ ಸಕ್ರಮ ಕೋರಿ ಬಂದ ಅರ್ಜಿಗಳ ಬಗ್ಗೆ ಗೋಮಾಳ ಜಮೀನನ್ನು ಸಕ್ರಮಗೊಳಿಸಲು ತಿಳಿಸಿದ್ದು, ಈ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:25310:2001ರ ದಿ:16-8-2001ರ ಮೇರೆಗೆ ತಡೆಯಾಜ್ಞೆ ಇದ್ದು ನಂತರದಲ್ಲಿ ಈ ರಿಟ್ ನಂಬರಿನಲ್ಲಿ ಆಗಿರುವ ಆದೇಶದ ತೀರ್ಪಿಗೆ ಒಳಪಟ್ಟು ಮಂಜೂರಾತಿ ನೀಡಬಹುದೆಂದು ತಿಳಿಸಿದ್ದು, ಈಗ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ತ್ವರಿತವಾಗಿ ಬಗರ ಹುಕುಂ ಸಾಗುವಳಿ ಸಕ್ರ ಮೀಕರಣ ಸಮಿತಿಯ ಸಭೆಗಳನ್ನು ನಡೆಸಿ, ಬಂದಿರುವ ಅರ್ಜಿಗಳನ್ನು ಒಂದು ವರ್ಷದೊಳಗಾಗಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.